ಪ್ರಶ್ನೆ ಸಂಖ್ಯೆ ೭೦೨(೧೮೪೮)
(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)
ಪ್ರಶ್ನೆ ಸಂಖ್ಯೆ. ೭೦೯(೧೭೦೪)
(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)
ಪ್ರಶ್ನೆ ಸಂಖ್ಯೆ. ೭೧೦(೧೦೧೭)
(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)
ಪ್ರಶ್ನೆ ಸಂಖ್ಯೆ ೭೧೧(೮೬೮)
(ಮಾನ್ಯ ಸದಸ್ಯರ ಪ್ರಶ್ನೆಯನ್ನು ಮುಂದೂಡಲಾಗಿದೆ)

Employees kept under suspension in Horticulture Department.

133. SRI. B. R. NEELAKANTAPPA (Tarikere).—Will the Minister of State for Horticulture be pleased to state :—

(a) the number of employees, kept under suspension in the Horticulture Department during the year 1985 (caste-wise information may be furnished) ;

(b) the final action taken after conducting enquiry with regard to the suspended employees ?

ಶ್ರೀ ಬಿ. ಸೋಮಶೇಖರ್ (ತೋಟಗಾರಿಕೆ ರಾಜ್ಯ ಸಚಿವರು) —ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಹೀಗಿದೆ ಸುಮಾರು ೩೩ ಜನರನ್ನು ಇದುವರೆವಿಗೂ ಅಮಾನತ್ತಿನಲ್ಲಿಟ್ಟಿದ್ದು ಇದರಲ್ಲಿ ಸುಮಾರು ೧೧ ಜನ ಒಕ್ಕಲಿಗರು, ೧೨ ಜನ ಲಿಂಗಾಯತರು ಹಾಗೂ ೨ ಕುರುಬರು ೨ ಕುಂಬಾರರು ಹಾಗೂ ಒಬ್ಬರು ಈಡಿಗರು ಒಬ್ಬರು ದೇವಾಂಗದವರು ಹಾಗೂ ಮೂರು ಜನ ಎಸ್.ಸಿ. ಜನಾಂಗಕ್ಕೆ ಸೇರಿದವರು. ಹಾಗೂ ಒಬ್ಬರು ಎಸ್.ಟಿ. ಜನಾಂಗಕ್ಕೆ ಸೇರಿದವರು.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ ತೋಟಗಾರಿಕೆ ಇಲಾಖೆ ಒಂದು ರೀತಿಯಲ್ಲಿ ಸೆಂಟ್ರಲ್ ಜೈಲ್ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಇಲಾಖೆಗೆ ಯಾರೇ ಹೋದರು ಸಹ ಅಲ್ಲಿನ ಅಧಿಕಾರಿಗಳು ಹೋದವರನ್ನು ಕಳ್ಳರನ್ನು ನೋಡಿದ ದೃಷ್ಟಿಯಲ್ಲಿ ನೋಡುತ್ತಾರೆ. ಅಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳನ್ನು ಸಹ ಅಲ್ಲಿನ ಮುಖ್ಯಾಧಿಕಾರಿ ಕಳ್ಳರ ದೃಷ್ಟಿಯಲ್ಲಿಯೇ ನೋಡುತ್ತಾರೆ. ನಾವು ಎಲ್ಲರನ್ನೂ ಒಂದೇ ದೃಷ್ಟಿಯಲ್ಲಿ ನೋಡುವುದು ಸರಿಯಲ್ಲ. ಈ ಇಲಾಖೆಯಲ್ಲಿ ಮೇಲಾಧಿಕಾರಿಗಳಿಗೆ ಗೊತ್ತಿರುವುದು ಕೆಳಗಿನ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡುವುದಂ ಇಲ್ಲ ಡಿಸ್‌ಮಿಸ್ ಮಾಡುವುದು, ಈ ಎರಡು ಮಾತ್ರ ಗೊತ್ತು. ಏನಾ ಕಾರಣ ಅಲ್ಲಿನ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡಿ ಸರ್ಕಾರದ ಹಣವನ್ನು ಸರಿಯಾದ ಕೆಲಸಕಾರ್ಯಗಳಿಗೆ ವಿನಿಯೋಗ ಮಾಡದೆ ವೃಥಾ ಪೋಲು ಮಾಡುತ್ತಿದ್ದಾರೆ. ತಾವೇ ನೋಡಿ ಮಾನ್ಯ ಮಂತ್ರಿಗಳು ಕೊಟ್ಟಿರುವ ಅಂಕಿಅಂಶಗಳನ್ನು. ಈ ಇಲಾಖೆಯ ಇತಿಹಾಸದಲ್ಲಿಯೇ ಯಾವತ್ತೂ ಇಷ್ಟೊಂದು ದೊಡ್ಡ ಪ್ರಮಾಣದ ಸಸ್‌ಪೆಂಡ್‌ಗಳು ಆಗಿರಲಿಲ್ಲ ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳಂ ಗಮನ ಹರಿಸಂತ್ತಾರೆಯೇ?

ಶ್ರೀ ಬಿ. ಸೋಮಶೇಖರ್.—ಮಾನ್ಯ ಅಧ್ಯಕ್ಷರೇ ಸುಮಾರು ೩೩ ಜನರನ್ನು ಅಮಾನತ್ತಿನಲ್ಲಿಟ್ಟಿದ್ದು ಅದರಲ್ಲಿ ಸುಮಾರು ೧೯ ಕೇಸ್‌ಗಳಲ್ಲಿ ಅಧಿಕಾರಿಗಳನ್ನು ನೇಮಕ ಮಾಡಿ ವಿಚಾರಣೆ ನಡೆಸುತ್ತಿದ್ದೇವೆ. ಇನ್ನು ಉಳಿದ ೧೩ ಕೇಸ್‌ಗಳಲ್ಲಿ ವಿಚಾರಣೆಯನ್ನು ಮಾಡುವುದಕ್ಕಾಗಿ ಬೇರೆ ಅಧಿಕಾರಿಗಳನ್ನು ನೇಮಕ ಮಾಡಬೇಕಾಗಿದೆ. ಮಾನ್ಯ ಸದಸ್ಯರು ಏನು ನಮ್ಮ ಇಲಾಖೆಯ ಮೇಲೆ ಒಂದು ಗಂಭೀರವಾದಂಥ ಆಪಾದನೆಯನ್ನು ಮಾಡುತ್ತಿದ್ದಾರೆ ಆ ಬಗ್ಗೆ ನಾನು ಹೇಳುವುದೇನೆಂದರೆ ಯಾರು ಸರ್ಕಾರಿ ಸೇವೆಯನ್ನು ಸಲ್ಲಿಸುವಾಗ ಸರಿಯಾಗಿ ಅವರ ಕೆಲಸ ನಿರ್ವಹಣೆ ಮಾಡುವುದಿಲ್ಲವೋ ಮತ್ತು ಯಾರ ಮೇಲೆ ಭ್ರಷ್ಟಾಚಾರದ ಆಪಾದನೆಗಳು ಬರುತ್ತವೆಯೋ ಅಂತಹವರನ್ನು ನಾವು

ಅಮಾನತ್ತಿನಲ್ಲಿಡಬೇಕಾಗುತ್ತದೆ. ಆ ಒಂದು ದೃಷ್ಟಿಯಿಂದ ನಾವು ಇವರನ್ನು ಅಮಾನತ್ತಿನಲ್ಲಿಟ್ಟಿದ್ದೇವೆ. ಬೇರೆ ಯಾವುದೇ ಕಾರಣಕ್ಕೆ ಅಲ್ಲ ಆದಷ್ಟು ಬೇಗ ಈ ಕೇಸ್‌ಗಳನ್ನು ವಿಚಾರಣೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಆದ್ದರಿಂದ ಈ ಬಗ್ಗೆ ಹೆಚ್ಚಿನ ಚರ್ಚೆ ಆಗತ್ಯವಿಲ್ಲವೆಂದು ಭಾವಿಸಿದ್ದೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ .....

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಸಮರ್ಪಕವಾದಂಥ ಉತ್ತರ ಕೊಟ್ಟಿದ್ದಾರಲ್ಲ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ ಈ ಇಲಾಖೆಯಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಕೈಗೊಳ್ಳುವುದಕ್ಕಿಂತ ಮೇಲಾಗಿ ಸಸ್‌ಪೆಂಡ್ ಮಾಡುವುದರಲ್ಲಿ ಎತ್ತಿದ ಕೈ. ಇವರು ಇದುವರೆವಿಗೂ ಯಾವುದೇ ಅಭಿವೃದ್ಧಿ ಕೆಲಸಕಾರ್ಯಗಳ ಬಗ್ಗೆ ಗಮನ ಕೊಟ್ಟಿಲ್ಲ. ಇದು ಕರ್ನಾಟಕ ರಾಜ್ಯದ ಎಲ್ಲಾ ಇಲಾಖೆಗಳಿಗೂ ಅತಿ ಸಣ್ಣ ಇಲಾಖೆ. ಆದರೆ ಸಸ್‌ಪೆಂಡ್ ಮಾಡಿರುವ ಇಲಾಖೆಗಳಲ್ಲಿ ಇದು ಮೊದಲನೆಯ ಇಲಾಖೆ. ಈ ಇಲಾಖೆ ಒಂದು ಇತಿಹಾಸವನ್ನೇ ನಿರ್ಮಾಣ ಮಾಡಿದೆ. ಈ ಇಲಾಖೆಯ ಮಾನ್ಯ ಮಂತ್ರಿಗಳು ಇನ್ನು ಯುವಕರು. ಅವರ ಇಲಾಖೆಯ ನೌಕರರನ್ನು ಜೈಲಿನಲ್ಲಿರ ತಕ್ಕಂಥ ಕಳ್ಳರನ್ನು ನೋಡಿಕೊಂಡಂತೆ ಆ ಇಲಾಖೆಯ ಮೇಲಾಧಿಕಾರಿಗಳು ನೋಡಿಕೊಳ್ಳುವುದು ಇನ್ನಾ ಮುಂದಾದರೂ ಬಿಡಬೇಕು. ಎಲ್ಲರೂ ಕಳ್ಳರೆಂದು ಹಳದಿ ಕಣ್ಣಿನಿಂದ ನೋಡುವುದು ಬೇಡ. ಅಲ್ಲಿನ ನೌಕರರು ಉತ್ತಮ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಬಿ. ಸೋಮಶೇಖರ್.—ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಪ್ರಶ್ನೆ ಸಂಖ್ಯೆ. ೭೧೩ (೧೦೨೨)

(ಮಾನ್ಯ ಸದಸ್ಯರು ಗೈರು ಹಾಜರು).

ತಡೆಹಿಡಿಯಲಾದ ಪ್ರಶ್ನೆಗಳು

ಸರ್ಕಾರಿ ಶಾಲೆಗಳಲ್ಲಿ ದೊರೆಯುವ ಕೊಠಡಿಗಳನ್ನು ಸರ್ಕಾರಿ ಕಛೇರಿಗಾಗಿ ಆಕ್ರಮಿಸಿ ಕೊಂಡಿರುವುದು

೭೬. ಶ್ರೀ ಮೊಹಮದ್ ಮೊಯಿನುದ್ದೀನ್ (ಚಾಮರಾಜಪೇಟೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಶಾಲಾ ಕಾಲೇಜುಗಳಲ್ಲಿ ಆಡಳಿತಕ್ಕಾಗಿ ಪಠ್ಯಪುಸ್ತಕ ಉತ್ತರ ಪತ್ರಿಕೆಗಳು ಇತ್ಯಾದಿ ಉಪಯೋಗಕ್ಕಾಗಿ ಉಪಯೋಗಿಸಿರುವ ಕೋಣೆಗಳೆಷ್ಟು?

ಆ) ಹಾಗಿದ್ದಲ್ಲಿ ಶಾಲೆಗಳ ಹೆಸರು ಮತ್ತು ಉಪಯೋಗಿಸುತ್ತಿರುವ ಅವಧಿ?

ಶ್ರೀ ಎಂ. ರಘುಪತಿ (ಮಾನ್ಯ ಶಿಕ್ಷಣ ಸಚಿವರು).—

ಅ) ಒಟ್ಟು ೧೬೪ ಕೊಠಡಿಗಳ ಪೈಕಿ ೧೧೫ ಕೊಠಡಿಗಳನ್ನು ಪಠ್ಯ ಪುಸ್ತಕಗಳ ದಾಸ್ತಾನಿಗಾಗಿ ತಾತ್ಕಾಲಿಕವಾಗಿ ಉಪಯೋಗಿಸಲಾಗುತ್ತಿದ್ದು ೪೦ ಕೊಠಡಿಗಳನ್ನು ಕಛೇರಿಗಳನ್ನು ನಡೆಸಲು ಮತ್ತು ಮಧ್ಯಾಹ್ನದ ಉಪಹಾರಕ್ಕಾಗಿ ಉಪಯೋಗಿಸಲಾಗುತ್ತಿದೆ. ಮತ್ತು ಉಳಿದ ಮೂರು ಕೊಠಡಿಗಳನ್ನು ಪದವಿ ಪೂರ್ವ ಶೈಕ್ಷಣಿಕ ಉತ್ತರ ಪತ್ರಿಕೆಗಳನ್ನಿಡಲು ಉಪಯೋಗಿಸಲಾಗುತ್ತಿದೆ.

ಆ) ಅನುಬಂಧ ಅ, ಆ, ಇ ಯಲ್ಲಿ ಕೊಡಲಾಗಿದೆ.